**4** ಕಳೆದ ಹತ್ತು ವರ್ಷಗಳಲ್ಲಿ ದಲಿತ ಲೇಖಕರಿಂದ ಬಂದ ಉತ್ತಮ ಕೃತಿ ಎಂದು ಒಂದನ್ನು ಬೊಟ್ಟು ಮಾಡುವುದು ನನಗೆ ಕಷ್ಟವಾಗುತ್ತದೆ. ಕತೆ, ಕಾವ್ಯ, ಆತ್ಮಕತೆ, ಪ್ರಬಂಧ ಹೀಗೆ ಒಂದೊಂದು ಪ್ರಕಾರದಲ್ಲೂ ಒಂದೊಂದನ್ನು ಉತ್ತಮ ಎಂದು ಗುರುತಿಸಬಹುದಾದಷ್ಟು ಕೃತಿಗಳು ಇದ್ದಾಗ್ಯೂ ನಾನು ದೇವನೂರ ಮಹಾದೇವರ 'ಎದೆಗೆ ಬಿದ್ದ ಅಕ್ಷರ' ಕೃತಿಯನ್ನು ನನಗಿಷ್ಟವಾದ ಕೃತಿ ಎಂದು ಹೇಳಬಯಸುತ್ತೇನೆ. ಅರ್ಧ ಶತಮಾನದ ಕನ್ನಡ ಸಾಹಿತ್ಯ, ಸಮಾಜ, ಸಂಸ್ಕೃತಿಗಳ ಸ್ಥೂಲವಾದ ವಿವರಗಳನ್ನು, ದಲಿತರ ಮುಂದಿನ ಸವಾಲುಗಳನ್ನು, ಅವನ್ನು ಎದುರಿಸಬೇಕಾದ ದಾರಿಗಳನ್ನು ರಾಜಕೀಯವಾಗಿ, ಸಾಹಿತ್ಯಕವಾಗಿ, ಶೈಕ್ಷಣಿಕವಾಗಿ ತಲುಪಬೇಕಾದ ಗುರಿ, ಗಮ್ಯಗಳನ್ನು ತಿಳಿಸಿಕೊಡುವ ಉತ್ತಮ ಕೃತಿ ಇದಾಗಿದೆ.

**5** ದಲಿತ ಲೇಖಕರ ಆರಂಭ ಕಾಲದ ಕೃತಿಗಳ ಆಶಯ ಅಂಬೇಡ್ಕರ್ ಪ್ರಣೀತ ಶಿಕ್ಷಣ, ಸಂಘಟನೆ, ಹೋರಾಟದ ಗುರಿಯನ್ನು ಅನುಮೋದಿಸಿ ಅನುಷ್ಠಾನಗೊಳಿಸುವ ದಿಸೆಯಲ್ಲಿ ಇದ್ದು, ಪ್ರಸ್ತುತ ಅದು ಸಾಮಾಜಿಕ ಸ್ಥಾನಮಾನ, ರಾಜಕೀಯ ಪ್ರಾತಿನಿಧ್ಯ, ಸಂವಿಧಾನದ ಹಕ್ಕುಗಳ ಅನುಷ್ಠಾನ ಮತ್ತು ಸಾಮಾಜಿಕ ನ್ಯಾಯದ ಸಮಪಾಲನ್ನು ದಲಿತರಿಗೂ ಕೊಡಿಸುವ ಮತ್ತು ಪಡೆಯುವ ಪ್ರಣಾಳಿಕೆಯ ಆಶಯವನ್ನು ಪ್ರಕಟ ಪಡಿಸುತ್ತದೆ. ಇತ್ತೀಚೆಗಿನ ದಲಿತ ಕಾವ್ಯ, ಅಂಬೇಡ್ಕರ್ ಅಲ್ಲದೆ, ಬಸವ ಮತ್ತು ಬುದ್ಧರ ತತ್ವ ಪ್ರತಿಪಾದನೆಯ ಅಭಿವ್ಯಕ್ತಿಗೆ ತೀವ್ರವಾಗಿ ಹಂಬಲಿಸುವ ಕೆಲವು ಲೇಖಕರು ಅಪರೂಪಕ್ಕೆ ಅಧ್ಯಾತ್ಮದ ಪರಿಶೋಧನೆಯಲ್ಲೂ ತೊಡಗಿಸಿಕೊಳ್ಳುತ್ತಿದ್ದಾರೆ.

**6** ಮೊದಲಯದಾಗಿ ದಲಿತ ಮಹಿಳೆಯರು ಅಕ್ಷರ ಲೋಕಕ್ಕೆ ತೆರೆದುಕೊಂಡದ್ದೇ ಬಹಳ ತಡವಾಗಿ. ಕಲಿತ ದಲಿತ ಮಹಿಳೆಯರಿಗೆ ಇತರೆ ಸಮುದಾಯಗಳ ಮಹಿಳೆಯರಿಗಿಂತಲೂ ತಮ್ಮ ಮೇಲಿನ ದೌರ್ಜನ್ಯ, ಶೋಷಣೆ ಅಥವಾ ಅಂತರಂಗದ ಖಾಸಗಿ ಅನುಭವಗಳನ್ನು ಕುಟುಂಬದಲ್ಲಿ ಅಭಿವ್ಯಕ್ತಿಸುವುದಕ್ಕೆ ಇರುವ ನಿರ್ಬಂಧಗಳೇ ವಿಪರೀತವಾಗಿವೆ. ಇಲ್ಲೂ ಕೂಡಾ ಅವಳು ಪುರುಷನ ಅಧೀನೆಯೇ. ಇದೆಲ್ಲವನ್ನೂ ಅಕ್ಷರರೂಪದಲ್ಲಿ ಹೊರಹಾಕುವ ಮೂಲಕ ಬಹಿರಂಗಪಡಿಸಿದಾಗ ತಮ್ಮ ಸಮುದಾಯದಿಂದಲೇ ಎದುರಾಗಬಹುದಾದ ಪ್ರತಿರೋಧ ಹಾಗೂ ಸಾಮಾಜಿಕ ಕಟ್ಟುಪಾಡುಗಳು ಅವಳನ್ನು ನಿರ್ಭಿಡೆಯಿಂದ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಬಿಡುತ್ತಿಲ್ಲವೆನ್ನಿಸುತ್ತದೆ. ಕಾವ್ಯ, ನಾಟಕ ಕಾದಂಬರಿ, ಪ್ರಬಂಧಗಳಂತಹ ಸೃಜನಶೀಲ ಕೃತಿಗಳು ಈ ಕಾರಣಗಳಿಂದಾಗಿಯೇ ದಲಿತ ಲೇಖಕಿಯರಿಂದ ಸೃಷ್ಟಿಯಾಗುತ್ತಿಲ್ಲ ಅಂತ ಅನ್ನಿಸುತ್ತದೆ. ವಿಮರ್ಶೆ, ವ್ಯಕ್ತಿಚಿತ್ರ, ಇಂತಹ ಪ್ರಕಾರದಲ್ಲೇ ಅವರು ಹೆಚ್ಚಾಗಿ ಬರೆಯುತ್ತಿರುವ ಹಿಂದಿನ ಗುಟ್ಟು ಸಹ ಇದೇ ಅನ್ನಿಸುತ್ತದೆ.

**7** ದಲಿತ ಸಾಹಿತ್ಯದ ಗೊತ್ತು ಗುರಿಗಳು ಕಳೆದ ಈ 50 ವರ್ಷಗಳಲ್ಲಿ ವಸ್ತು, ಅಭಿವ್ಯಕ್ತಿಯ ದೃಷ್ಟಿಯಿಂದ ಕೆಲವು ಪ್ರಕಾರಗಳಲ್ಲಿ ಏಕತಾನತೆ ಹಾಗೂ ಪುನರಾವರ್ತನೆಗೊಂಡಂತೆ ಖಂಡಿತಾ ಅನ್ನಿಸುತ್ತದೆ. ಹೊಸ ತಲೆಮಾರಿನ ದಲಿತ ಲೇಖಕರು ತಮ್ಮ ತಾತ ಮುತ್ತಾತಂದಿರ ಕಾಲದ ಶೋಷಣೆಯನ್ನೇ ಮೆಲುಕು ಹಾಕುತ್ತಾ ಕೂರದೆ, ಬದಲಾದ ಕಾಲಘಟ್ಟದಲ್ಲಿ ತಾವು ಅನುಭವಿಸುತ್ತಿರುವ ಶೋಷಣೆಯ ಸ್ವರೂಪವನ್ನು ಮನಗಂಡು ಅದನ್ನು ಅಭಿವ್ಯಕ್ತಿಸಬೇಕಾಗಿದೆ. ಸಂವಿಧಾನದತ್ತವಾಗಿ ವಿವಿಧ ರೀತಿಯ ಉನ್ನತ ಹುದ್ದೆಗಳನ್ನು ಅಲಂಕರಿಸಿರುವ ಈ ಕಾಲದ ದಲಿತರು ವಿವಿಧ ರಂಗಗಳಲ್ಲಿ ಅತ್ಯಂತ ಸೂಕ್ಷ್ಮವಾಗಿ ಅನುಭವಿಸುತ್ತಿರುವ ಶೋಷಣೆಯ ಸ್ವರೂಪವನ್ನು ಕಲಾತ್ಮಕವಾಗಿ ಹಿಡಿಯಬೇಕಿದೆ.